

# ಶೇರ್ವಾನಿ ಮೇಲೆ ಮಂದ ಬೆಳಕಿನ ನರ್ತನ

ಪುರುಷರ ಪಾರ್ಟಿ ಉಡುಗೆಗಳನ್ನು ಸಾಮಾನ್ಯವಾಗಿ ಹತ್ತಿ, ಟೆರಿಕಾಟ್ ಮಿಶ್ರಿತ ಹತ್ತಿ ಬಟ್ಟೆಗಳಲ್ಲೇ ತಯಾರಿಸುತ್ತಿದ್ದ ಕಾಲವೊಂದಿತ್ತು. ಈಗ ಕಾಟನ್ ಸಿಲ್ಕ್, ಲೈನನ್ ಹಾಗೂ ಟೆರಿಕಾಟ್ ಎಲ್ಲವನ್ನೂ ಬೆರೆಸಿದಂಥ ವಸ್ತ್ರಗಳು ಟ್ರೆಂಡ್. ಕುಂದನ್, ಟಿಕ್ಲಿ ಮುಂತಾದ ಹೊಳಪುಳ್ಳ ಸಾಧನವನ್ನು ಬಳಸಿ ತಯಾರಿಸಿದ ಶೇರ್ವಾನಿಗಳು ಪುರುಷರನ್ನು ಸಮಾರಂಭಗಳಲ್ಲಿ ಹೀರೋಗಳನ್ನಾಗಿಸುತ್ತವೆ.

■ ವಿಶಾಖ ಎನ್.

ಹಿಮಶ್ವೇತ ಬಣ್ಣದ ಅಂಗಿ. ಅದರ ಮೇಲೆ ನೀಲಿ, ಕೆಂಪು, ಹಸಿರು ಬಣ್ಣಗಳ ಸಣ್ಣ ಸಣ್ಣ ನಕ್ಷತ್ರಗಳು. ಹತ್ತಿಯ ನೂಲಿನಿಂದ ತಯಾರಿಸಿದ್ದು. ಅಳತೆ ಮಾಡಿದಷ್ಟೇ ಚಿಕ್ಕ ಜೇಬು. ಅದರಲ್ಲಿ ಮೊಬೈಲ್ ಇಡುವ ಹಾಗಿಲ್ಲ. ಐದಾರು ವರ್ಷಗಳ ಹಿಂದೆ ಇಂಥ ಅಂಗಿಯನ್ನು 'ಪಾರ್ಟಿ ವೇರ್ ಶರ್ಟ್' ಎಂದು ಮಾರುಕಟ್ಟೆ ಗುರುತಿಸಿತ್ತು. ಮಬ್ಬು ದೀಪ ಬಿಳಿ ಅಂಗಿಯ ಮೇಲೆ ಬಿದ್ದಾಗ ಅದರ ಮೇಲಿನ ನಕ್ಷತ್ರಗಳು ಫಳಫಳೈನ್ನುತ್ತದೆ ಎಂಬ ತರ್ಕ ಅದು. ಆದರೆ, ಈಗ ಅಂಥ ನಕ್ಷತ್ರಗಳ ಅಂಗಿ ಮಾರುಕಟ್ಟೆಯಲ್ಲಿ 'ಪಾರ್ಟಿ ವೇರ್' ಆಗಿ ಉಳಿದಿಲ್ಲ. ಆಕಾಶ ನೀಲಿ ಬಣ್ಣದ ಜೀನ್ಸಿನ ಮೇಲೆ ಕಪ್ಪು ಲೈನನ್ ಅಂಗಿ ತೊಟ್ಟು ಕಾರು ಹತ್ತಿದವರೂ ಯಾವುದೋ ಪಾರ್ಟಿಗೆ ಹೋಗುತ್ತಿದ್ದಾರೆ ಎಂದು ಗುರುತಿಸುವ ಕಾಲವಿದು.

'ಮಾನ್ಯವರ್' ತರಹದ ದೇಸಿ ಶೈಲಿಯ ಶೇರ್ವಾನಿಗಳು ಈಗ ನಮ್ಮ ದೇಶದ ಪುರುಷರ 'ಪಾರ್ಟಿ ವೇರ್'ಗಳಾಗಿ ಜನಪ್ರಿಯ. ಢಾಳು ಬಣ್ಣದ (ಬಂಗಾರದ ಬಣ್ಣದ್ದಕ್ಕೂ ಬೇಡಿಕೆ ಹೆಚ್ಚಾಗಿದೆ) ಮಂಡಿಯುದ್ದದ ನಿಲುವಂಗಿಯಂಥ ಅಥವಾ ಜುಬ್ಬದಂಥ ವಸ್ತ್ರವಿದು. ಭುಜದ ಅಳತೆಗೆ ತಕ್ಕಂತೆ ಅದನ್ನು ಹೊಲಿದು ಕೊಡುವ ದರ್ಜಿಗಳೂ ಇದ್ದಾರೆ. ಹೆಣ್ಣು ಮಕ್ಕಳು ಧರಿಸುದ ಸಲ್ವಾರ್ ಕಮೀಜ್‌ನ ಪ್ಯಾಂಟನ್ನೇ ಹೋಲುವ ಪೈಜಾಮ. ಅದನ್ನು ಬಹುತೇಕ ಕಾಲುಗಳ ಆಹಾರಕ್ಕೆ ತಕ್ಕಂತೆ ವಿಕಸನಗೊಳ್ಳುವಂಥ ನೂಲುಗಳಿಂದ ತಯಾರಿಸಲಾಗಿರುತ್ತದೆ. ಸಾಂಪ್ರದಾಯಿಕ ಪೈಜಾಮಗಳನ್ನು ಬಳಸುವುದೂ ವಾಡಿಕೆಯಲ್ಲಿದೆ. ಶೇರ್ವಾನಿ ತೊಟ್ಟವರು ಉದ್ದ ಕಾಣುತ್ತಾರೆ ಎಂಬ ನಂಬಿಕೆ ಫ್ಯಾಷನ್‌ಪ್ರಿಯರಿಗೆ ಇದೆ. ಅದಕ್ಕೆ ತಕ್ಕಂತೆ ಚಾವ್ಡಾ ಚಪ್ಪಲಿಯನ್ನೋ, ರಾಜಸ್ಥಾನಿ ಮಾದರಿಯ ಅಥವಾ ಕಾನ್ಪುರದ ಚಪ್ಪಲಿಯನ್ನೋ ತೊಡುವುದು 'ಪಾರ್ಟಿ ವೇರ್'ನ ಪರಿಪೂರ್ಣತೆಗೆ ಸಾಕ್ಷಿ.

ಈ ರೀತಿಯ ವಸ್ತ್ರಗಳನ್ನು ತೊಡುವವರು ತಮ್ಮ ಕೇಶವಿನ್ಯಾಸದ ಕಡೆಗೂ ನಿಗಾ ಮಾಡುತ್ತಾರೆ. ಸುತ್ತ ಶಾರ್ಟ್ ಕಟ್ ಮಾಡಿಸಿ, ನೆತ್ತಿ ಮೇಲೆ ಜಂಪೆ ಕೂದಲು ಇರುವಂತೆ ನೋಡಿಕೊಂಡು, ಶೇರ್ವಾನಿಯ ಮೇಲೊಂದು ಎದ್ದುಕಾಣುವ ಬಣ್ಣದ ಸ್ಟೋಲ್ ಹಾಕಿಕೊಳ್ಳುತ್ತಾರೆ.